ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

" 2001ರ ಕರ್ನಾಟಕ ಕೃಷಿ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(೫) ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2001 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕರ ಸಚಿವರು) : ಮಾನ್ಯ ಅಧ್ಯಕ್ಷರೆ, "2001ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

" 2001ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ಇತ್ಯಾದಿ

ಅಧ್ಯಕ್ಷರು : "ಖಂಡ 2 ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

" ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕರ ಸಚಿವರು) : ಮಾನ್ಯ ಅಧ್ಯಕ್ಷರೆ, "2001ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

" 2001ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆಯನ್ನು ನೀಡಲಾಯಿತು

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ನಾವು ಸಭಾತ್ಯಾಗ ಮಾಡಿರುವಾಗ ಮಸೂದೆಯನ್ನು ಪಾಸ್ ಮಾಡಿಸಿಕೊಂಡಿದ್ದಾರೆ. ವಿಧೇಯಕದ ಉದ್ದೇಶಗಳೇನು ಎಂಬ ಬಗ್ಗೆಯಾದರೂ ಸದನಕ್ಕೆ ಮಂತ್ರಿಗಳು ತಿಳಿಸಬೇಕಲ್ಲವೆ? ನಾವು ಅದರ ಬಗ್ಗೆ ಮಾತ ನಾಡುವವರಿದ್ದೆವು.

ಅಧ್ಯಕ್ಷರು : ವಿಧೇಯಕವು ಪಾಸ್ ಆಗುವ ಕೊನೆಯ ಹಂತದಲ್ಲಿ ನೀವು ಬಂದು ಮಂತ್ರಿಗಳು ವಿಧೇಯಕದ ಬಗ್ಗೆ ಹೇಳಬೇಕೆಂದರೆ ನ್ಯಾಯವೆ? ಪ್ರಾರಂಭಿಕ ಹಂತದಲ್ಲಿಯೇ ನೀವು ಬಂದು ಕೇಳಿದ್ದರೆ ಮಂತ್ರಿಗಳು ವಿಧೇಯಕದ ಉದ್ದೇಶಗಳ ಬಗ್ಗೆ ಹೇಳುತ್ತಿದ್ದರು. ಆದರೆ ಈಗ ವಿಧೇಯಕ ಅಂಗೀಕಾರವಾಗಿ ಬಿಟ್ಟಿರುವುದರಿಂದ ನಾನು ಮತ್ತೆ ಹಿಂದಕ್ಕೆ ಹೋಗಲು ಸಾಧ್ಯವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನೀವು ನಮಗೆ ಹಲವಾರು ವಿಷಯಗಳಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟು ಸಹಕಾರ ಕೊಟ್ಟಿದ್ದೀರಿ. ಧನ್ಯವಾದಗಳು. ಆದರೆ ಕಡೆಯ ಪಕ್ಷ ಸಾರ್ವಜನಿಕರ ಹಿತದೃಷ್ಟಿಯಿಂದಾದರೂ ಮಾನ್ಯ ಮಂತ್ರಿಗಳು ಇಂಥ ಮಸೂದೆಯನ್ನು ಸದನದಲ್ಲಿ ಇಟ್ಟಿದ್ದೇನೆ. ಇದರ ಉದ್ದೇಶಗಳು ಹೀಗಿವೆ ಎನ್ನುವ ಬಗ್ಗೆ ಹೇಳಬೇಕಾಗಿತ್ತು. ಈ ರೀತಿ ಉದ್ದೇಶಗಳನ್ನು ಸದನದಲ್ಲಿ ಹೇಳಿದರೆ ಪತ್ರಿಕೆಗಳವರು ಅದರ ಬಗ್ಗೆ ಪ್ರಚಾರ ಕೊಟ್ಟು ಸಾರ್ವಜನಿಕರಿಗೆ, ವ್ಯಾಪಾರಸ್ಥರಿಗೆ ತಿಳಿಯುವ ಹಾಗೆ ವಿಷಯಗಳನ್ನು ಪ್ರಕಟಿಸಿ ಪ್ರಚಾರ ಕೊಡುತ್ತಿದ್ದರು. ಆದ್ದರಿಂದ ವಿದ್ಯಾವಂತರಾಗಿರುವ ಮಾನ್ಯ ಹಿಂಡಸಗೇರಿಯವರು ಈಗಲಾದರೂ ವಿಧೇಯಕದ ಬಗ್ಗೆ ವಿವರಗಳನ್ನು ಸದನದಲ್ಲಿ ಹೇಳಿದರೆ ಒಳ್ಳೆಯದು.

ಅಧ್ಯಕ್ಷರು : ಸಿಂಧ್ಯಾರವರೆ, ನೀವು ಹೇಳುವುದೇನೋ ಸರಿ ಇದೆ. ಆದರೆ ಈ ಹಂತದಲ್ಲಿ ನಾನು ಅಸಹಾಯಕನಾಗಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನೀವು ಈ ಹಂತದಲ್ಲಿ ಅಸಹಾಯಕರು ಎಂಬುದು ನಿಜ. ಆದರೆ ವಿಧೇಯಕದ ಬಗ್ಗೆ ವಿವರಗಳನ್ನು ಸದನಕ್ಕೆ ಕೊಡಬೇಕಾದುದು ಸರ್ಕಾರದ ಜವಾಬ್ದಾರಿಯುತ ಕರ್ತವ್ಯವಾಗಿರುತ್ತದೆ. ಏಕೆಂದರೆ ಸಾರ್ವಜನಿಕರು ಕಾನೂನು ನಿಯಮಗಳ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದಲ್ಲವೇ?

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷಗಳವರು ಹೊರಗಡೆ ಇರುವಾಗ ಮಸೂದೆಗೆ ಒಪ್ಪಿಗೆ ಪೊರಬಿಸಿಕೊಳ್ಳುವುದು ಸರಿಯಾದ ಕ್ರಮವಲ್ಲ.

ಅಧ್ಯಕ್ಷರು : ನಿಮಗೆ ಹೊರಗೆ ಯಾರು ಹೋಗಿ ಎಂದು ಹೇಳಿದರು? ಅವರೇನಾದರೂ ನಿಮಗೆ ಹೊರಗೆ ಹೋಗಿ ಎಂದು ಹೇಳಿದರೆ?

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಪ್ರಜಾಪ್ರಭುತ್ವದಲ್ಲಿ ವಾಕ್‌ಔಟ್, ಧರಣಿಯನ್ನು ಆಕ್ಸಿಪ್ಟ್ ಮಾಡುವಂಥವುಗಳೇ ಆಗಿರುವಾಗ ಯಾರು ನಿಮಗೆ ಹೊರಗೆ ಹೋಗಿ ಎಂದವರು ಎಂದರೆ ಹೇಗೆ? ನಮ್ಮನ್ನೇನೋ ಸರ್ಕಾರದವರು ಹೊರಗೆ ಇಟ್ಟು ಬಿಲ್ ಪಾಸ್ ಮಾಡಿಸಿಕೊಳ್ಳಲಿ ಪರವಾಗಿಲ್ಲ. ಆದರೆ ರಾಜ್ಯದ ಜನರಿಗೆ ವಿಧೇಯಕದ ಉದ್ದೇಶಗಳ ಬಗ್ಗೆ ಸರ್ಕಾರದವರು ಸದನದಲ್ಲಿ ತಿಳಿಸಬೇಕಾಗಿತ್ತಲ್ಲವೇ? ಒಂದು ಕೆಲಸ ಮಾಡಿ. ಇನ್ನು ಮುಂದೆ ಸರ್ಕಾರದವರು ವಿಧೇಯಕಗಳನ್ನು ಸದನದಲ್ಲಿ ಮಂಡಿಸುವಾಗ ವಿರೋಧ ಪಕ್ಷದವರು ಸದನದಲ್ಲಿರಬಾರದು ಎಂದು ಒಂದು ಬಿಲ್ ತಂದುಬಿಡಲಿ. ಅದನ್ನು ಅಪ್ರೂವ್ ಮಾಡಿ ಬಿಡುತ್ತೇವೆ.

ಶ್ರೀ ಬಿ.ಎನ್. ಬಚ್ಚೇಗೌಡ : ಸರ್ಕಾರದವರಿಗೆ ಮೆಜಾರಿಟಿ ಇದೆಯೆಂದು ಹೀಗೆ ಮಾಡುವುದೆ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಹಿಂದೆ ಜೆ.ಹೆಚ್. ಪಟೇಲ್‌ರವರು ಉಪಯೋಗಿಸಿದ ಶಬ್ದವನ್ನು ಈಗ ನಾನು ಬಳಸಬೇಕಾಗುತ್ತದೆ. ಅವರು ಅಂದು ಹೇಳಿದ್ದೇನೆಂದರೆ "ಹೌದಯ್ಯ ಮೆಜಾರಿಟಿ ಇದೆ, ನಾವು ಮಾಡಿಕೊಳ್ಳುತ್ತೇವೆ" ಎನ್ನುವ ಪದಗಳನ್ನೇ ಬಳಸಿದ್ದಾರೆ. ಅವುಗಳು ದಾಖಲೆಯಲ್ಲಿವೆ. ಆದರೆ ನಾನು ಹಾಗೆ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರು ಈಗ ಇಲ್ಲ. ಹೊರಗೆ ಹೋಗಿರುವುದರಿಂದ ಅವರು ಒಳಗೆ ಬಂದಮೇಲೆ ವಿಧೇಯಕವನ್ನು ಪಾಸ್ ಮಾಡಿಸಿಕೊಳ್ಳುತ್ತೇವೆ ಎಂದು ಸರ್ಕಾರದವರು ನಿಮಗೆ ಹೇಳಬೇಕಾಗಿತ್ತು. ಆದರೆ ಅವರಿಗೆ ಆ ರೀತಿ ಇಷ್ಟವಿಲ್ಲದಿರುವುದರಿಂದ ಹೇಗಾದರೂ ಕಳ್ಳದಾರಿ ಹುಡುಕಿ ಬಿಲ್ ಪಾಸ್ ಮಾಡಿಸಿಕೊಂಡು ಬಿಡೋಣ ಎನ್ನುವುದೇ ಅವರ ಇಚ್ಛೆಯಾಗಿತ್ತೇನೋ. ಒಟ್ಟಿನಲ್ಲಿ ಕಳ್ಳದಾರಿ ಹುಡುಕುವುದೇ ಅವರ ಕೆಲಸ.

ಅಧ್ಯಕ್ಷರು : ಸರ್ಕಾರದವರು ಮುಂದೆ ಸರಿಪಡಿಸಿಕೊಳ್ಳಿ. ಈಗ 2001ರ ಖಾದಿ ಮತ್ತು ಗ್ರಾಮೋದ್ಯೋಗ (ತಿದ್ದುಪಡಿ) ವಿಧೇಯಕವನ್ನು ಸಚಿವರು ಮಂಡಿಸಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ : ಈ ವಿಧೇಯಕವನ್ನು ಮಂಡಿಸುವುದಕ್ಕಾದರೂ ಸಣ್ಣ ಕೈಗಾರಿಕಾ ಮಂತ್ರಿಗಳನ್ನೇ ಸದನಕ್ಕೆ ಕರೆಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಆಯಿತು, ನಾಳೆಯೇ ಅವರೇ ವಿಧೇಯಕವನ್ನು ಮಂಡಿಸುತ್ತಾರೆ.

ಅಧ್ಯಕ್ಷರು : ಈ ವಿಧೇಯಕವನ್ನು ನಾಳೆ ತೆಗೆದುಕೊಳ್ಳೋಣ. ಈಗ ಮಾನ್ಯ ಕಾನೂನು ಮಂತ್ರಿಗಳು ಸ್ಥಾಯಿ ಸಮಿತಿಗಳ ಬಗ್ಗೆ ಇರುವ ಪ್ರಸ್ತಾಪ ಮಂಡಿಸಿ.

(3) ವಿಧಾನ ಮಂಡಲದ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳ ನೇಮಕಾತಿ ಬಗ್ಗೆ

+ ಶ್ರೀ ಟಿ.ಬಿ. ಚುಂಚೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರನ್ನು ಪಕ್ಷಗಳು ನೀಡಿರುವ ಒಡಂಬಡಿಕೆ ಪಟ್ಟಿಯ ರೀತಿಯಲ್ಲಿಯೇ ನೇಮಿಸಲು ಈ ಸದನವು ಸಭಾಧ್ಯಕ್ಷರಿಗೆ ಅಧಿಕಾರ ನೀಡುತ್ತದೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು : ಈಗ ವರದಿಯನ್ನೊಪ್ಪಿಸುವುದು ತೆಗೆದುಕೊಳ್ಳೋಣ.

(4) ವರದಿಗಳನ್ನೊಪ್ಪಿಸುವುದು

ಶ್ರೀ ಎ. ನಾಗರಾಜು (ಮಾಲೂರು) : ಮಾನ್ಯ ಅಧ್ಯಕ್ಷರೆ, ನಾನು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಎರಡನೇ ವರದಿಯನ್ನು ಒಪ್ಪಿಸುತ್ತೇನೆ.

ಶ್ರೀ ಜೆ. ಚಾಮುಗೌಡ (ಹಲಸೂರು) : ಮಾನ್ಯ ಅಧ್ಯಕ್ಷರೆ, ನಾನು ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿಯ ಎರಡನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಅಧ್ಯಕ್ಷರೆ, ನಾನು, ಸಾರ್ವಜನಿಕ ಉದ್ಯಮಗಳ ಸಮಿತಿಯ 90,91,92 ಹಾಗೂ 93ನೇ ವರದಿಗಳನ್ನು ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಕರಿಯಣ್ಣ ಅವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ನಾನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿಯ ಮೊದಲನೆ ವರದಿಯನ್ನು ಒಪ್ಪಿಸುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೆ, ಅಧೀನ ಶಾಸನ ರಚನಾ ಸಮಿತಿಯ 27ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಗಳನ್ನೊಪ್ಪಿಸಲಾಯಿತು.

(5) ಅಧ್ಯಕ್ಷರ ಅಪ್ಪಣೆ ಮೇರೆಗೆ

ತುಮಕೂರಿನ ರುಕ್ಸಾನ ಎನ್ನುವ ಒಂಭತ್ತು ವರ್ಷದ ಹೆಣ್ಣು ಮಗಳಿಗೆ ಚಿತ್ರಹಿಂಸೆ ನೀಡಿ ಕಾಲುಗಳಿಗೆ ಬೇಡಿ ಹಾಕಿ ಜೀತದಾಳಾಗಿ ಇಟ್ಟುಕೊಂಡಿರುವುದು.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಚಾರವನ್ನು ಮಾನ್ಯ ಗೃಹ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇವತ್ತು ಕನ್ನಡಪ್ರಭ ಮತ್ತು